

ಅಲ್ಲಿ ನಿಂತು ನೋಡಿದರೆ, 360 ಡಿಗ್ರಿ ಸುತ್ತಲೂ ಆವರಿಸಿದ ಮಂಜಿನ ಬೆಟ್ಟಗಳ ಸಾಲು, ಅದರಾಚೆಗೆ ಹಿಮ ಹೊತ್ತ ರುದ್ರ ರಮಣೀಯ ಪರ್ವತ, ಹಿಮ ಕರಗಿ ನೀರಾಗಿ, ಕಾಲ್ಬದಿಗೆ ಹರಿವ ಸಣ್ಣ ತೊರೆ, ಅಲ್ಲೇ ಪಕ್ಕದ ಹಚ್ಚ ಹಸಿರ ಬೆಟ್ಟದಿಂದ ಧುಮ್ಮಿಕ್ಕುವ ಬೆಳ್ನೊರೆಯ ಜಲಪಾತ, ನೀಲಾಕಾಶ, ಬಿಳಿ ಮೋಡಗಳ ಚಿತ್ತಾರ... ಸೂರ್ಯ ನೆತ್ತಿ ಮೇಲಿದ್ದರೂ ಮೈಸೋಕುವ ತಂಗಾಳಿ, ಇದೆಲ್ಲದರ ಮಧ್ಯೆ ಭೂಮಿಯ ಮೇಲೆ ಪುಷ್ಪವೃಷ್ಟಿಯಾಗಿದೆಯೇನೋ ಎಂದು ಭಾಸವಾಗುವಂತೆ ಆ ಹುಲ್ಲುಗಾವಲಿನ ಕಣಿವೆಯ ತುಂಬಾ ಕಣ್ಣು ಹಾಯಿಸಿದಷ್ಟು ದೂರಕ್ಕೂ ಬಣ್ಣ ಬಣ್ಣದ ಹೂಗಳ ಹಾಸು! ಇಂತಹದ್ದೊಂದು ಸಮ್ಮೋಹನಗೊಳಿಸುವಂತಹ ನೈಸರ್ಗಿಕ ಸೌಂದರ್ಯ ಕಾಣಸಿಗುವುದು, ಉತ್ತರಾಂಚಲದ ಪ್ರಸಿದ್ಧ ಚಾರಣ ಸ್ಥಳ 'ವ್ಯಾಲಿ ಆಫ್ ಫ್ಲವರ್ಸ್'ನಲ್ಲಿ.

## ವ್ಯಾಲಿ ಆಫ್ ಫ್ಲವರ್ಸ್‌ನಲ್ಲೇನಿದೆ?

ವ್ಯಾಲಿ ಆಫ್ ಫ್ಲವರ್ಸ್ ಪ್ರಾರಂಭಿಕ ಹಂತದ ಪರ್ವತಾರೋಹಿಗಳಿಗೆ ಹೇಳಿ ಮಾಡಿಸಿದಂತಹ ಚಾರಣ. ಜೂನ್ ತಿಂಗಳಿನಿಂದ ಪ್ರಾರಂಭವಾಗಿ ಅಕ್ಟೋಬರ್ ಕೊನೆಯವರೆಗೂ ಮಾತ್ರ ಟ್ರೆಕಿಂಗ್ ಮಾಡಬಹುದಾದ ಈ ಸ್ಥಳಗಳು, ನಂತರದ ಆರು ತಿಂಗಳು ಸಂಪೂರ್ಣ ಹಿಮಾವೃತವಾಗುತ್ತವೆ. ಸಮುದ್ರ ಮಟ್ಟಕ್ಕಿಂತ 12,000 ಅಡಿಗಳಷ್ಟು ಎತ್ತರದಲ್ಲಿರುವ ವ್ಯಾಲಿ ಆಫ್ ಫ್ಲವರ್ಸ್ ಕಣಿವೆಯು ದಟ್ಟ ಹೂವಿನ ವನದಂತೆ ವ್ಯಾಪಿಸಿರುವ ವಿಸ್ತೀರ್ಣ 87.5 ಚದರ ಕಿ.ಮೀ.ಗಳಷ್ಟು! ಚಾರಣದ ಪ್ರಮಾಣ ಅತ್ಯಂತ ಕಠಿಣವಲ್ಲದಿದ್ದರೂ, ಚಾರಣದ ಹಾದಿ, ಎತ್ತರೆತ್ತರ ಕಡಿದಾದ ಕಲ್ಲು ಬಂಡೆಗಳಿಂದ ಕೂಡಿದ್ದಾದ್ದರಿಂದ ತಕ್ಕ ಮಟ್ಟಿನ ಪರ್ವತಾರೋಹಣದ ಪೂರ್ವ ತಯಾರಿ ಅವಶ್ಯಕ.

ಈ ಕಣಿವೆಯಲ್ಲಿ 520ಕ್ಕೂ ಹೆಚ್ಚು ಪ್ರಭೇದಗಳ ಆಲ್ಫೈನ್ ಹೂಗಳಿವೆ ಎಂದು ಅಂದಾಜಿಸಲಾಗಿದೆ. ಈ ಬೆಟ್ಟಗಳು ಈಗ ಕಂಡಂತೆ ಇನ್ನೊಂದು ತಿಂಗಳಿಗೆ ಕಾಣಿಸುವುದಿಲ್ಲ. ಕಾರಣ ಒಮ್ಮೆ ನೀಲಿ–ನೇರಳೆ ಹೂಗಳಿಂದ ಕಂಗೊಳಿಸುವ ಬೆಟ್ಟಗಳು, ಮತ್ತೊಂದಷ್ಟು ಮಳೆಯ ನಂತರ ಅರಳಿ ನಿಲ್ಲುವ ಹಳದಿ–ಗುಲಾಬಿ ಹೂಗಳಿಂದ ಮೈದಳೆದು ನಿಂತಿರುತ್ತವೆ. ಈ ಪುಷ್ಪಗಳ ಕಣಿವೆಯಿಂದ ಹರಿದುಬರುವ ಹಿಮನದಿ ಹೆಸರು 'ಪುಷ್ಪವತಿ'. ಬ್ರಹ್ಮಕಮಲ, ಬ್ಲೂ ಪಾಪ್ಪಿಲ್, ವಿವಿಧ ಬಗೆಯ ಆರ್ಕಿಡ್‌ಗಳು, ನಾಗಮಲ್ಲಿಗೆ ಇತ್ಯಾದಿ ಇಲ್ಲಿನ ಮುಖ್ಯವಾದ ಹೂಗಳು. ವೈದ್ಯಕೀಯ ಮಹತ್ವವಿರುವ 45ಕ್ಕೂ ಹೆಚ್ಚು ಗಿಡ ಮೂಲಿಕೆಗಳೂ ಇಲ್ಲಿ ಗುರುತಿಸಿಕೊಂಡಿವೆ. ಇಲ್ಲಿ ಹಿಮಕರಡಿ, ಹಿಮ ಚಿರತೆ, ಕಸ್ತೂರಿ ಮೃಗ, ನೀಲಿ ಕುರಿಗಳು, ಬಂಗಾರದ ಕೋಗಿಲೆ, ಹಿಮ ಪಾರಿವಾಳ ಇನ್ನಿತರ ಬಣ್ಣಬಣ್ಣದ ಪಕ್ಷಿಗಳು ಮತ್ತು ಸಾವಿರಾರು ಬಗೆಯ ಬಣ್ಣಬಣ್ಣದ ಚಿಟ್ಟೆಗಳ ಜೀವಸಂಕುಲವಿದೆ.

## ವ್ಯಾಲಿ ಆಫ್ ಫ್ಲವರ್ಸ್ ಇತಿಹಾಸ

ಈ ಕಣಿವೆಯ ಹುಟ್ಟು ಕೂಡ ಒಂದು ಆಕಸ್ಮಿಕ ಸಂಶೋಧನೆ. 1931ರಲ್ಲಿ ಮೂವರು ಬ್ರಿಟಿಷ್ ಪರ್ವತಾರೋಹಿಗಳು, ಮೌಂಟ್ ಕಾಮೆಟ್ ಪರ್ವತಾರೋಹಣ ಮುಗಿಸಿ ಹಿಂದಿರುಗುವಾಗ ತಮ್ಮ ಹಾದಿಯನ್ನು ತಪ್ಪಿ ಒಂದು ಹುಲ್ಲುಗಾವಲಿನ ಬೆಟ್ಟವನ್ನು ಪ್ರವೇಶಿಸಿದರಂತೆ. ಆವರೆಗೂ ಯಾರೂ ಓಡಾಡದೇ ಇದ್ದ ಆ ಸ್ಥಳ ಸಂಪೂರ್ಣ ಹೂಗಳ ರಾಶಿಯಿಂದ ಆವೃತಗೊಂಡಿದ್ದನ್ನು ನೋಡಿ ದಿಗ್ಭ್ರಾಂತರಾಗಿ ಅದನ್ನು 'ವ್ಯಾಲಿ ಆಫ್ ಫ್ಲವರ್ಸ್' ಎಂದು ಉದ್ಗರಿಸಿದರೆಂಬುದು ಈ ಸ್ಥಳದ ಇತಿಹಾಸ. ಆ ಪರ್ವತಾರೋಹಿಗಳಲ್ಲಿ ಒಬ್ಬರಾದ ಫ್ರಾಂಕ್ ಸ್ಮಿಥ್ ತನ್ನ ಪರ್ವತಾರೋಹಣ ಬಗ್ಗೆ ಬರೆದು ಪ್ರಕಟಗೊಳಿಸಿದ ಪುಸ್ತಕ ಕೂಡ ಇದೇ ಹೆಸರಿನಲ್ಲಿದೆ. ನಂತರದ ವರ್ಷಗಳಲ್ಲಿ ಜಾನ್ ಮಾರ್ಗರೇಟ್ ಲೆಗ್ಗ್ ಎಂಬ ಸಸ್ಯಶಾಸ್ತ್ರಜ್ಞೆ ಇಲ್ಲಿಗೆ ಬಂದು, ಇಲ್ಲಿನ ಸಸ್ಯರಾಶಿಯ ಮಹತ್ವದ ಕುರಿತಾಗಿ ಸಾಕಷ್ಟು ಸಂಶೋಧನೆ ನಡೆಸಿದರು ಎನ್ನಲಾಗಿದೆ. ಆದರೆ ಅಧ್ಯಯನದ ಸಮಯದಲ್ಲಿ, ಈ ಕಣಿವೆಯಲ್ಲಿ ಕಾಲು ಜಾರಿ ತಮ್ಮ ಜೀವತೆತ್ತರಾದ್ದರಿಂದ ಅವರ ನೆನಪಿನಲ್ಲಿ ಕಟ್ಟಿದ ಸಮಾಧಿ ಇಂದಿಗೂ ವ್ಯಾಲಿ ಆಫ್ ಫ್ಲವರ್ಸ್‌ನಲ್ಲಿ ಕಾಣಬಹುದು. ಇಲ್ಲಿನ ಸಸ್ಯ ಮತ್ತು ಪ್ರಾಣಿ ಸಂಕುಲಗಳ ಪ್ರಾಮುಖ್ಯತೆಯ ಕುರಿತಾದ ಹೆಚ್ಚಿನ ಅಧ್ಯಯನ ಮತ್ತು ಉಳಿವಿಗೋಸ್ಕರ, ಸ್ಥಳೀಯರ ಓಡಾಟ, ಜಾನುವಾರುಗಳ ಮೇವಿಗಾಗಿ ಬಳಸಿಕೊಳ್ಳುವುದನ್ನು ನಿಷೇಧಿಸಲಾಗಿದೆ. 1982ರಲ್ಲಿ ಈ ಕಣಿವೆಯನ್ನು ನ್ಯಾಷನಲ್ ಪಾರ್ಕ್ ಎಂದು ಘೋಷಿಸಲಾಯಿತು. ಜೊತೆಗೆ 1988ರಿಂದ ಈ ಕಣಿವೆಯನ್ನು 'ವಿಶ್ವ ಪಾರಂಪರಿಕ ಜೀವ ವೈವಿಧ್ಯ ತಾಣ'ವೆಂದು ಕೂಡ ಯುನೆಸ್ಕೊ ಘೋಷಿಸಿದೆ. ಈ ಪ್ರವಾಸಿ ಸ್ಥಳಕ್ಕೆ ಕೇವಲ ಟ್ರೆಕಿಂಗ್‌ಗೆ ಅನುಮತಿ ನೀಡುತ್ತಾರೆಯೇ ಹೊರತು ಅಲ್ಲೇ ಉಳಿಯುವಂತಿಲ್ಲ.